# ಬದುಕು ಬದಲಿಸಬಲ್ಲ 'ಸಿ.ವಿ'

**ಪದವೀಧರನೊಬ್ಬ ತನ್ನ ವ್ಯಕ್ತಿಪರಿಚಯವನ್ನು ಉದ್ಯೋಗದಾತನಿಗೆ ಅತ್ಯುತ್ತಮ ರೀತಿಯಲ್ಲಿ ಮನವರಿಕೆ ಮಾಡಿಕೊಡುವಂತೆ ಇರಬೇಕು ನಿಮ್ಮ ಸಿ.ವಿ!**

■ ನಿರಂಜನ ವಾನಳ್ಳಿ



ಸಿ.ವಿ.ಗಳ ಬಗ್ಗೆ ನಮ್ಮ ಅನೇಕ ಯುವಕರಿಗೆ ಸ್ಪಷ್ಟತೆ ಇಲ್ಲ. ಯಾವುದು ನಮ್ಮ ಹಣೆಬರಹವನ್ನೇ ಬದಲಿಸಬಲ್ಲದೋ ಅದರ ಬಗ್ಗೆ ನಮ್ಮ ಅನೇಕ ಯುವಕರಿಗೆ ಇನ್ನೂ ಅವಜ್ಞೆ ಇದೆ.

ಈಗ ಯಾವುದೇ ಸಂದರ್ಶನಕ್ಕೆ ಹೋಗುವುದಕ್ಕಾಗಲೀ, ಕಂಪೆನಿಗೆ ಅರ್ಜಿ ಹಾಕುವುದಕ್ಕಾಗಲೀ ಅಗತ್ಯ ಬೇಕಾಗುವ ಮಾಹಿತಿ ನಮ್ಮ ಕರಿಕ್ಯುಲಮ್ ವೈಟೆ ಅಥವಾ ಅದರ ಸಂಕ್ಷೇಪ ಸಿ.ವಿ. ಇದು ಮೂಲತಃ ನಮ್ಮ ಅಕಡೆಮಿಕ್ ವ್ಯಕ್ತಿತ್ವ ವಿವರ. ಇಂಟರ್‌ನೆಟ್‌ಗೆ ಹೋದರೆ ಸಿ.ವಿ.ಯ ಸಾವಿರಾರು ಮಾದರಿಗಳು ಲಭ್ಯವಿರುತ್ತವೆ. ಅವುಗಳಿಂದ ಸಿ.ವಿ. ಹೇಗಿರುವುದೆಂಬ ಒಂದು ಅಂದಾಜು ಚಿತ್ರಣ ಸಿಕ್ಕುತ್ತದೆ. ಅದನ್ನು ಮಾದರಿಯಾಗಿಟ್ಟುಕೊಂಡು ನಮ್ಮದೇ ಸಿವಿ ಮಾಡಿಕೊಳ್ಳಲು ಸಹಾಯಕವಾಗುತ್ತದೆ. ಆದರೆ ಅದನ್ನೇ ನಕಲು ಮಾಡಲು ಹೋದರೆ ಸಿ.ವಿ.ಯ ಉದ್ದೇಶ ವಿಫಲವಾಗುತ್ತದೆ.

ಏಕೆಂದರೆ ಸಿ.ವಿ. ಇರುವುದೇ ವ್ಯಕ್ತಿಯ ವ್ಯಕ್ತಿತ್ವದ ಅನನ್ಯತೆಯನ್ನು ಹಾಗೂ ಸಾಧ್ಯತೆಗಳನ್ನು ಪರಿಚಯಿಸಿಕೊಳ್ಳುವುದಕ್ಕಾಗಿ. ಕೆಲಸ ನೀಡುವ ವ್ಯಕ್ತಿಗೆ ತಮ್ಮಲ್ಲಿಗೆ ಬರುವ ಉದ್ಯೋಗಿ ಸಮರ್ಥನೂ, ವಿದ್ಯಾವಂತನೂ ನಾಯಕತ್ವ ಗುಣ ಹೊಂದಿರುವವನೂ ಆಗಿರ ಬೇಕೆಂದು ನಿರೀಕ್ಷೆಯಿರುತ್ತದೆ. ನಿಮ್ಮನ್ನು ಸಂದರ್ಶನಕ್ಕೆ ಕರೆಯುವ ಮುನ್ನ ನಿಮ್ಮನ್ನು ಪರಿಚಯಿಸಿಕೊಳ್ಳಲು ಇರುವ ಸಾಧನ ಸಿ.ವಿ. ಆ ಸಿ.ವಿ ನಿಮ್ಮದೇ ಆಗಿರಬೇಕು. ಇನ್ನೊಬ್ಬರ ನಕಲು ಆಗಬಾರದು. ಹಾಗೇನಾದರೂ ನಕಲಾಯಿತೋ ಮೊದಲ ನೋಟಕ್ಕೆ ಅದು ತಿರಸ್ಕರಿಸಲ್ಪಡಬಹುದು. ಅದಕ್ಕೇ ಸಿದ್ಧ ಮಾದರಿಯ ಸಿ.ವಿಗಳನ್ನು ಆಚೆ ಇಟ್ಟು ನಿಮ್ಮ ಕ್ರಿಯಾಶೀಲತೆಯನ್ನು ಹಾಗೂ ಸೃಜನಶೀಲತೆ ಯನ್ನು ಬಿಂಬಿಸುವ ಹಾಗೆ ನಿಮ್ಮ ಸಿ.ವಿಯನ್ನು ನೀವೇ ಬರೆದು ಕೊಳ್ಳುವುದು ನಿಮ್ಮ ಹಣೆ ಬರಹವನ್ನು ನೀವೇ ನಿರ್ಧರಿಸಿಕೊಳ್ಳುವತ್ತ ಪ್ರಥಮ ಹೆಜ್ಜೆ.

ಸಿ.ವಿ ಅನನ್ಯವೆನಿಸಬೇಕು. ದೊಡ್ಡ ಕಂಪನಿಗಳು ಕೆಲಸಕ್ಕೆ ಕರೆದಾಗ ಭಾರತದಂಥ ದೇಶದಲ್ಲಿ ಅರ್ಜಿ ಹಾಕುವವರು ಲಕ್ಷಾಂತರ ಜನ. ದೊಡ್ಡ ಕಂಪನಿಯ ಮಾನವ ಸಂಪನ್ಮೂಲ ಅಧಿಕಾರಿಯಾದವರಿಗೆ, ಇಮೇಲ್‌ನಲ್ಲಿ ಬರುವ ಸಿ.ವಿಗಳತ್ತ ಕಣ್ಣು ಹಾಯಿಸಲು ಸಿಗುವ ಸಮಯ ನಾಲ್ಕು ಸೆಕೆಂಡುಗಳು ಮಾತ್ರ. ಈ ನಾಲ್ಕು ಸೆಕೆಂಡಿನಲ್ಲಿ ನಿಮ್ಮ ಸಿ.ವಿಯಲ್ಲಿ ಏನೋ ವಿಶೇಷವಿದೆ, ತಮಗೆ ಬೇಕಾದ ವ್ಯಕ್ತಿ ಇವನಿರಬಹುದು ಅಂತ ಅವರಿಗೆ ಅನಿಸಿದರೆ ನೀವು ಮೊದಲ ಹಂತದಲ್ಲಿ ಗೆದ್ದಿರಿ. ನಾಲ್ಕು ಸೆಕೆಂಡಿನಲ್ಲಿ ಅವರನ್ನು ಸೆಳೆಯದೇ ಅವರು ಪುಟ ತಿರುಗಿಸಿಬಿಟ್ಟರೆ ಆ ಕಂಪನಿಗೆ ನೀವು ಸಿ.ವಿ ಕಳಿಸಿದ್ದು ವ್ಯರ್ಥವಾದಂತೆಯೇ. ಸಿ.ವಿ ಹೇಗಿರಬೇಕೆಂದರೆ ನಾಲ್ಕು ಸೆಕೆಂಡಿನಲ್ಲಿ ಓದುಗರ ಸೆಳೆಯುವಂತಿರಬೇಕು. ಇದು ಇನ್ನೊಂದರ ಪಡಿಯಚ್ಚು, ಇಂಟರ್‌ನೆಟ್‌ನಿಂದ ನಕಲು ಮಾಡಿದ ಹಳಸಲು ಮಾಹಿತಿ ಅನಿಸದೇ, ಅದರಲ್ಲಿ ಅಭ್ಯರ್ಥಿಯ ಭಿನ್ನತೆ ವ್ಯಕ್ತವಾಗುವಂತಿರಬೇಕು. ನಿಮ್ಮದು ಗೆಲ್ಲುವ ಸಿ.ವಿ ಆಗಬೇಕು. ಯಾರದೋ ಪಡಿಯಚ್ಚು ಆಗದಿರಲಿ.

ಈಗ ಸಾಮಾನ್ಯವಾಗಿ ಸಿ.ವಿಗಳಲ್ಲಿ ಅಭ್ಯರ್ಥಿಗಳು ತಮ್ಮ ಉದ್ದೇಶವನ್ನು ಬಹಳ ಅರ್ಥವತ್ತಾಗಿ ಬರೆದಿರುವುದನ್ನು ಕಾಣುತ್ತೇವೆ. ಅದನ್ನು ಓದಿದರೆ ಈ ಅಭ್ಯರ್ಥಿ ಬಹಳ ಮೇಧಾವಿ ಇರಬೇಕೆಂದೂ, ತನ್ನ ಜೀವನದ ಬಗ್ಗೆ ಸ್ಪಷ್ಟ ಗುರಿ ಇಟ್ಟುಕೊಂಡವನೆಂದೂ ಅನಿಸುತ್ತದೆ. ಆದರೆ ಇನ್ನಷ್ಟು ಸಿ.ವಿ.ಗಳನ್ನು ತಿರುವಿ ಹಾಕುವಾಗ ಅರೆ! ಈ ವಾಕ್ಯಗಳನ್ನು ಎಲ್ಲೋ ಓದಿದ್ದೇನಲ್ಲಾ ಎನಿಸುತ್ತದೆ. ಹಾಗೇ ಹತ್ತಾರು ಕಡೆ ಜೀವನದ ಧ್ಯೇಯವೆಂಬುದಾಗಿ ಅದದೇ ವಾಕ್ಯಗಳನ್ನು ಓದುವಾಗ ಅರ್ಥವಾಗುವುದೆಂದರೆ ಇವೆಲ್ಲ ಇಂಟರ್‌ನೆಟ್‌ನಿಂದ ಕದ್ದ ಮಾಲುಗಳು ಎಂದು! ತನ್ನ ಜೀವನದ ಉದ್ದೇಶವನ್ನೂ ಸ್ವತಃ ಬರೆಯಲಾಗದೇ ಇನ್ನೊಬ್ಬರದನ್ನು ನಕಲು ಮಾಡುವ ವ್ಯಕ್ತಿಯಿಂದ ಏನನ್ನು ನಿರೀಕ್ಷಿಸಬಹುದು ? ಇಂಥ ಸಿ.ವಿ.ಗಳ ಬಗ್ಗೆ ಮೊದಲ ನೋಟಕ್ಕೆ ತಿರಸ್ಕಾರ ಮೂಡಿದರೆ ಅಚ್ಚರಿಯಿಲ್ಲ. ಇದಕ್ಕೆ ಪರಿಹಾರವೆಂದರೆ ಸಿ.ವಿ.ಯಲ್ಲಿ ಏನಿರಬೇಕು ಎಂಬ ಅಂಶಗಳನ್ನು ನೋಡಿಕೊಂಡು ನಮ್ಮದೇ ಧಾಟಿ/ಶೈಲಿಯಲ್ಲಿ ಸಿದ್ಧಪಡಿಸುವುದು. ಸಿ.ವಿ ಬರವಣಿಗೆಯಲ್ಲೂ ಒರಿಜಿನಾಲಿಟಿಯನ್ನು ಇದರಿಂದ ಇತರರು ಅರ್ಥ ಮಾಡಿಕೊಳ್ಳಬಹುದು.

## ಏನು ವ್ಯತ್ಯಾಸ?

ಸಿ.ವಿಯಲ್ಲಿ ಮುಖ್ಯವಾಗಿ ಏನಿರಬೇಕು? ಬಯೋಡೇಟಾ ಹಾಗೂ ಸಿ.ವಿ ಗಳಿಗೆ ಏನು ವ್ಯತ್ಯಾಸ ಎಂಬುದು ಬಹಳ ಜನ ತಲೆಕೆಡಿಸಿಕೊಳ್ಳುವ ವಿಚಾರ. ಇವುಗಳ ನಡುವಿನ ಭಿನ್ನತೆ ಅವುಗಳ ಹೆಸರಿನಲ್ಲೇ ಸ್ಪಷ್ಟವಾಗುತ್ತದೆ. ಬಯೋಡೇಟಾ ಎಂಬುದು ಜೈವಿಕ ಮಾಹಿತಿ ಹಾಗೂ ಕರ್ರಿಕ್ಯುಲಮ್ ವೈಟೆ ಎಂಬುದು ಬೌದ್ಧಿಕ ಮಾಹಿತಿ. ಬಯೋಡೇಟಾದಲ್ಲಿ ನಿಮ್ಮ ಹುಟ್ಟಿದ ದಿನ, ಊರು, ತಂದೆ ತಾಯಿ ಮುಂತಾಗಿ ವೈಯಕ್ತಿಕ ವಿವರಗಳೂ ಸೇರುತ್ತವೆ. ನೀವು ವಿವಾಹಿತರಾ, ಹೌದಾದರೆ ಎಷ್ಟು ಮಕ್ಕಳು, ಅವರ ವಯಸ್ಸೆಷ್ಟು – ಈ ವಿವರಗಳೆಲ್ಲ ಬಯೋ ಡೇಟಾದಲ್ಲಿ ಸೇರುತ್ತವೆ.

ಕರ್ರಿಕ್ಯುಲಮ್ ವೈಟೆ ಎಂಬುದು ನಿಮ್ಮ ವೃತ್ತಿಪರ ವಿಷಯಗಳ ಜಾತಕ. ಇದು ಮುಖ್ಯವಾಗಿ ನಿಮ್ಮ ವಿದ್ಯಾರ್ಹತೆ, ಕೌಶಲ, ತರಬೇತಿ, ಈ ತನಕ ಮಾಡಿರುವ ಉದ್ಯೋಗಗಳು, ಹೊಸ ಉದ್ಯೋಗದ ನಿರೀಕ್ಷೆ ಮುಂತಾದ ವಿಷಯಗಳನ್ನು ಒಳಗೊಂಡ ದಾಖಲೆ. ಉದ್ಯೋಗ